# ಅಪ್ಪಂದಿರಿಗೆ ಒಳ್ಳೆಯ ಸುದ್ದಿ

**ಪುರುಷರ ಶೌಚಾಲಯದಲ್ಲಿ ಮಕ್ಕಳಿಗೆ ಡಯಪರ್ ಬದಲಾಯಿಸುವುದಕ್ಕೆ ಅವಕಾಶ ಕಲ್ಪಿಸುವ ಮೂಲಕ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಲಿಂಗ ಸಮಾನತೆಯ ಪ್ರಯತ್ನವೊಂದು ಶುರುವಾಗಿದೆ. ಈ ಸಣ್ಣ ಪ್ರಯತ್ನ, ಮಗು ಮತ್ತು ಅಪ್ಪ ಇಬ್ಬರೇ ಪ್ರಯಾಣಿಸುತ್ತಿದ್ದಾಗ ಎದುರಾಗುತ್ತಿದ್ದ ದೊಡ್ಡ ಸಮಸ್ಯೆಯನ್ನು ಬಗೆಹರಿಸಿದೆ.**

■ ಸ್ವಯಂಪ್ರಭಾ



ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಮಕ್ಕಳಿಗೆ ಡಯಪರ್ ಬದಲಿಸಲು ಪುರುಷರ ಶೌಚಾಲಯದಲ್ಲಿಯೂ ಅವಕಾಶ ಕಲ್ಪಿಸಲಾಗಿದೆ. ಪುಟಾಣಿ ಮಕ್ಕಳನ್ನು ಕಂಕುಳಲ್ಲಿ ಕರೆದೊಯ್ಯುವ ಅಮ್ಮನಂತಹ ಅಪ್ಪಂದಿರಿಗೆ ಈ ಸೌಲಭ್ಯ ಅಗತ್ಯವಾಗಿತ್ತು.

ಮಗು ತಾಯಿಯ ಜೊತೆಗೇ ಇರುತ್ತದೆ ಎಂಬ ಸಾಮಾನ್ಯ ಗ್ರಹಿಕೆಯಲ್ಲಿಯೇ ನಮ್ಮ ಸುತ್ತಮುತ್ತಲಿನ ವ್ಯವಸ್ಥೆಗಳು ರೂಪುಗೊಂಡಿರುತ್ತವೆ. ತಂದೆಯಾದವನಿಗೆ ಅಂತಹ ಜವಾಬ್ದಾರಿಗಳೆಲ್ಲ ಇರುವುದಿಲ್ಲ ಎಂಬುದು ಒಂದು ಆಯಾಮವಾದರೆ, ಪುರುಷರು ಇಂತಹ ಉಸಾಬರಿಗಳನ್ನು ನಿಭಾಯಿಸಬೇಕಾಗಿಲ್ಲ ಎಂಬ ಒಂದು ಪರೋಕ್ಷ ವಿನಾಯಿತಿಯೂ ಈ ಗ್ರಹಿಕೆಯಲ್ಲಿ ಸೇರಿರುತ್ತದೆ.

ಕಾಲ ಬದಲಾದಂತೆ ಕೌಟುಂಬಿಕ ಹೊಣೆಗಾರಿಕೆಯ ಸ್ವರೂಪಗಳು ಬದಲಾಗುತ್ತಿವೆ. ಮಹಿಳೆಯರು ದುಡಿಮೆಗಾಗಿ ಮನೆಯಿಂದ ಹೊರಗೆ ಹೋಗಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಅಪ್ಪನೇ ಮಗುವನ್ನು ನಿಭಾಯಿಸಬೇಕಾಗುತ್ತದೆ. ಪ್ರಯಾಣದ ಸಂದರ್ಭದಲ್ಲಿ ಅಪ್ಪನೊಬ್ಬನೇ ಮಗುವನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಕರೆದೊಯ್ಯಬೇಕಾಗಬಹುದು. ಆಗ ಮಗುವಿನ ಅಗತ್ಯಗಳಿಗಾಗಿ ಇತರ ಮಹಿಳೆಯರನ್ನು ಸಹಾಯಕ್ಕಾಗಿ ಕೋರುವುದು ಅನಿವಾರ್ಯವಾಗುತ್ತದೆ. ಇತ್ತೀಚೆಗೆ ಒಬ್ಬರೇ ಪುರುಷ ಪಾಲಕರ (ಸಿಂಗಲ್ ಪೇರೆಂಟ್) ಸಂಖ್ಯೆಯೂ ಹೆಚ್ಚಾಗುತ್ತಿದೆ.

ಎಷ್ಟೋ ಸಂದರ್ಭಗಳಲ್ಲಿ ಅಪ್ಪನೂ ಅಮ್ಮನ ಹೊಣೆಗಾರಿಕೆಯನ್ನು ನಿಭಾಯಿಸುವ ಪರಿಸ್ಥಿತಿಗಳು ಎದುರಾದಾಗ, ಅವರು ಏನೇನು ತೊಡಕುಗಳನ್ನು ಎದುರಿಸುತ್ತಾರೆ ಎಂಬುದನ್ನು ಹೆಚ್ಚಿನವರು ಗಮನಿಸುವುದಿಲ್ಲ. ಹಾಗೊಂದುವೇಳೆ ಗಮನಕ್ಕೆ ಬಂದರೂ, ಅವುಗಳ ಕುರಿತು ಚರ್ಚೆಯಾಗುವುದು ಬಹಳ ಕಡಿಮೆ. ಅಮ್ಮನ ಹೊಣೆಗಾರಿಕೆಯನ್ನು ನಿಭಾಯಿಸುವುದು ತಮ್ಮ 'ಇಮೇಜ್‌ಗೆ ತುಸು ಕಡಿಮೆ' ಎಂಬ ಗ್ರಹಿಕೆ ಈ ಹಿಂದೆ ಇದ್ದುದರಿಂದ ಅಂತಹ ಚರ್ಚೆಗಳು ನಡೆದಿಲ್ಲವೇನೋ. ಬದಲಾದ ಪರಿಸ್ಥಿತಿಗೆ ಪೂರಕವಾಗಿ ಸಾಮಾಜಿಕ ವ್ಯವಸ್ಥೆಗಳೂ ಬದಲಾಗುವುದು ಶುಭಲಕ್ಷಣ ಅಲ್ಲವೇ. ಅಂತಹ ಪ್ರಯತ್ನವೊಂದು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಡೆದಿದೆ.

ಟ್ವಿಟರ್‌ನಲ್ಲಿ ಈ ಕುರಿತು ದೀರ್ಘ ಚರ್ಚೆಗಳೇ ನಡೆದಿವೆ. 'ನಾನು ಮತ್ತು ನನ್ನ ಮಗಳು ಹಲವು ಬಾರಿ ಪ್ರಯಾಣ ಮಾಡುತ್ತೇವೆ. ಅವಳು ಒಂದೂವರೆ ವರ್ಷದವಳಿದ್ದಾಗಲೇ ನಮ್ಮಿಬ್ಬರ ಪ್ರಯಾಣ ಆರಂಭವಾಯಿತು. ವಿಮಾನ ನಿಲ್ದಾಣದಲ್ಲಿ ಅವಳ ಡಯಪರ್ ಬದಲಿಸಬೇಕಾದರೆ ಹರಸಾಹಸ ಪಡುತ್ತಿದ್ದೆ. ಒಂದೋ, ಪುರುಷರ ಶೌಚಾಲಯದಲ್ಲೇ ಒಂದಿಷ್ಟು ಜಾಗ ಮಾಡಿಕೊಂಡು ಈ ಕೆಲಸ ಮಾಡಬೇಕಿತ್ತು. ಅಥವಾ ಹೊರಗೆ ಎಲ್ಲರೆದುರೇ ಈ ಕೆಲಸ ನಿರ್ವಹಿಸಬೇಕಿತ್ತು. ಅಷ್ಟೇ ಅಲ್ಲ, ಅವಳಿಗೆ ಸುಸ್ತು ಬಂದಾಗ, ಯಾರಾದರೂ ಮಹಿಳೆಯರಿಗೆ ದುಂಬಾಲು ಬಿದ್ದು ಡಯಪರ್ ತಕ್ಷಣ ಬದಲಿಸುವಂತೆ ಮಾಡಬೇಕಾಗಿತ್ತು. ಕೆಲವೊಮ್ಮೆ ಮಹಿಳೆಯರ ಶೌಚಾಲಯದಲ್ಲಿ ಯಾರೂ ಇಲ್ಲದೇ ಇದ್ದಾಗ, ಮಗಳನ್ನು ಹೊತ್ತುಕೊಂಡು ಅತ್ತ ನುಗ್ಗಿದ್ದೂ ಇದೆ' ಎಂದು ವಾತ್ಸಲ್ಯಮಯಿ ಅಪ್ಪನೊಬ್ಬರು ತಮ್ಮ ಅನುಭವ ಬರೆದುಕೊಂಡಿದ್ದಾರೆ.

'ಈ ಬದಲಾವಣೆಗಾಗಿ ಬಹಳ ದಿನಗಳಿಂದ ಕಾಯುತ್ತಿದ್ದೆವು. ಅದೀಗ ನಡೆದಿದೆ' ಎಂದು ಒಬ್ಬರು ಹೇಳಿಕೊಂಡರೆ, 'ಪಾಲನೆ ಪೋಷಣೆ ಎಂದರೆ ಕೇವಲ ಮಹಿಳೆಯರ ಬಾಬತ್ತಲ್ಲ' ಎಂದು ಮತ್ತೊಬ್ಬ ಅಪ್ಪ ಟ್ವೀಟ್ ಮಾಡಿ, ಮಗುವನ್ನು ಲಾಲನೆ ಪಾಲನೆ ಮಾಡುವುದು ತಮ್ಮ ಹಕ್ಕೂ ಹೌದು ಎಂಬ ಧಾಟಿಯಲ್ಲಿ ನುಡಿದಿದ್ದಾರೆ.

'ಹೌದು, ಪುರುಷರ ಶೌಚಾಲಯದಲ್ಲಿ ಈ ವ್ಯವಸ್ಥೆ ಕಲ್ಪಿಸಿರುವುದು ಉತ್ತಮ ನಿರ್ಧಾರ. ಆದರೆ ಇದನ್ನೇ ಹೊಗಳುತ್ತ ಕೂರದೇ, ಇದೇ ರೀತಿಯ ಲಿಂಗತ್ವ ಸಮಾನತೆಯನ್ನು ಇತರ ಸಾಮಾಜಿಕ ಪರಿಸರದಲ್ಲಿಯೂ ಒದಗಿಸಬೇಕು' ಎಂದು ಮತ್ತೊಬ್ಬರು ಆಗ್ರಹಿಸಿದ್ದಾರೆ.

ಕಾಲ ಎಷ್ಟು ಬದಲಾಗಿದೆ ನೋಡಿ.

ಪ್ರತಿಕ್ರಿಯಿಸಿ: feedback@sudha.co.in